# ಭವಿಷ್ಯದ ಬೆಂಗಳೂರಿಗೆ ನೀರಿನ ಗಂಭೀರ ಸಮಸ್ಯೆ

## ನಿವೃತ್ತ ನ್ಯಾ.ಸಂತೋಷ್‌ಹೆಗ್ಡೆ ಆತಂಕ । ನಮ್ಮ ಬೆಂಗಳೂರು ಪ್ರಶಸ್ತಿ ಪ್ರದಾನ

**ಬೆಂಗಳೂರು ಮಾ 15 :** ಕೆರೆಗಳ ಅತಿಕ್ರಮಣ, ರಾಜಾಕಾಲುವೆ ಒತ್ತುವರಿ ಮತ್ತು ಅಂತರ್ಜಲ ಕುಸಿತದಿಂದಾಗಿ ಬೆಂಗಳೂರು ಭವಿಷ್ಯದಲ್ಲಿ ಕುಡಿಯುವ ನೀರಿನ ಗಂಭೀರ ಸಮಸ್ಯೆ ಎದುರಿಸಲಿದೆ ಎಂದು ನಿವೃತ್ತ ಲೋಕಾಯುಕ್ತ ಹಾಗೂ ನ್ಯಾ. ಸಂತೋಷ್‌ಹೆಗ್ಡೆ ಆತಂಕ ವ್ಯಕ್ತಪಡಿಸಿದರು.

ನಮ್ಮ ಬೆಂಗಳೂರು ಪ್ರತಿಷ್ಠಾನ ವಿವಿಧ ಕ್ಷೇತ್ರಗಳ ಸಾಧಕರಿಗೆ ವಾರ್ಷಿಕ ಕೊಡಮಾಡುವ ನಮ್ಮ ಬೆಂಗಳೂರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ನಗರದ ಜನಮೂಲಗಳ ರಕ್ಷಣೆಗೆ ಇನ್ನಾದರೂ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದಿನ ಜನಾಂಗ ನಮ್ಮನ್ನು ಶಪಿಸಲಿದೆ ಎಂದರು. ಪ್ರಚಾರ ಬಯಸದೆ ಸೇವೆಯಲ್ಲಿ ತೊಡಗಿರುವವರನ್ನು ನಮ್ಮ ಬೆಂಗಳೂರು ಪ್ರತಿಷ್ಠಾನ ಗುರುತಿಸಿ ಸನ್ಮಾನಿಸುತಿರುವುದು ಅಭಿನಂದನಾರ್ಹ ಎಂದರು. ಸಮಾರಂಭದಲ್ಲಿ ಮಾತನಾಡಿದ ಚಿತ್ರನಟ ಗಣೇಶ್ ತಮ್ಮ ಅಭಿಮಾನಿಗಳ ಸಂಘದಿಂದ ಕೆರೆ ಉಳಿಸಿ ಅಭಿಯಾನವನ್ನು ಬೆಂಗಳೂರಿನಿಂದ ಆರಂಭಿಸಿ ರಾಜ್ಯವ್ಯಾಪಿ ವಿಸ್ತರಿಸುವ ಇಂಗಿತ ವ್ಯಕ್ತಪಡಿಸಿದರು. 16ನೇ ಶತಮಾನದಲ್ಲಿಯೇ ಭವಿಷ್ಯದ ಕಲ್ಪನೆ ಇರಿಸಿ ಕೆರೆಗಳನ್ನು ಕಟ್ಟಿದ್ದರು. ಆದರೆ ತಾಂತ್ರಿಕವಾಗಿ ಮುಂದುವರೆದಿರುವ ನಾವು ಅವುಗಳ ವಿನಾಶಕ್ಕೆ ಮುಂದಾಗಿರುವುದು ಸರಿಯಲ್ಲ. ಪ್ರಸ್ತುತ ಕೆರೆಗಳ ರಕ್ಷಣೆಗೆ ಹೋರಾಟ ಅನಿವಾರ್ಯ ಎಂದೂ ಗಣೇಶ್ ತಿಳಿಸಿದರು.

ಸಮಾಜಸೇವೆಗಾಗಿ ಮನೋಹರರಾವ್, ಉತ್ತಮ ಸರ್ಕಾರಿ ಸಂಸ್ಥೆ ಎಂದು ಬೆಂಗಳೂರು ಒನ್, ಅತ್ಯುತ್ತಮ ಸರ್ಕಾರಿ ನೌಕರರೆಂದು ಶಾಲಾ ಶಿಕ್ಷಕಿ ಟಿ.ಆರ್.ನಾಗಮಣಿ, ಮೀಡಿಯಾ ಸಂಸ್ಥೆ ವಿಭಾಗದಲ್ಲಿ ಸಿಟಿಜನ್ ಮ್ಯಾಟರ್ಸ್, ಸಾಮಾಜಿಕ ಜಾಗೃತಿಗಾಗಿ ತ್ಯಾಜ್ಯ ಮರುಬಳಕೆ ಕ್ರಾಂತಿ ಮಾಡಿರುವ ಪೂನಮ್ ಕಸ್ತೂರಿ, ಸಿಟಿಜನ್ ಗ್ರೂಪ್ ವಿಭಾಗದಲ್ಲಿ ಅಂಗವಿಕಲರ ಸಮೂಹ ಸಂಸ್ಥೆ ಸೇರಿದಂತೆ 21 ವಿಭಾಗಗಳಲ್ಲಿ ಪ್ರಶಸ್ತಿ ವಿತರಿಸಲಾಯಿತು.

ಸಮಾರಂಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್.ದೊರೆಸ್ವಾಮಿ, ಸಾಹಿತಿ ಪ್ರೊ.ಸಿದ್ದಲಿಂಗಯ್ಯ, ಸಂಗೀತ ನಿರ್ದೇಶಕ ರಾಜನ್‌ನಾಗೇಂದ್ರ, ನಮ್ಮ ಬೆಂಗಳೂರು ಪ್ರತಿಷ್ಠಾನದ ಸಂಸ್ಥಾಪಕ ಹಾಗೂ ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು. ಸಮಾರಂಭದ ಬಳಿಕ ಖ್ಯಾತ ಗಾಯಕಿ ಉಷಾಉತ್ತುಪ್ ಅವರಿಂದ ಗಾಯನ ಕಾರ್ಯಕ್ರಮ ನಡೆಯಿತು. ಸಮಾರಂಭಕ್ಕೆ ಗೈರುಹಾಜರಾಗಿದ್ದ ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಅಣ್ಣಾ ಹಜಾರೆ ಕಾರ್ಯಕ್ರಮಕ್ಕೆ ಯಶಸ್ಸು ಕೋರಿ ಸಂದೇಶ ರವಾನಿಸಿದ್ದರು.